ಜನಗಳು ಸಾಮಾನ್ಯವಾಗಿ ಅಡ್ಡ ಬರುವುದಿಲ್ಲ. ಕುಳಿತಿದ್ದವರು ಎದ್ದು ನಿಲ್ಲುತ್ತಾರೆ.

ಗೌರವ ಅಲ್ಲ. ಭಯ... ಭಯ... ಆದರೆ ಶ್ರೀರಾಮ ದೇವರ ದೇವಸ್ಥಾನದಲ್ಲಿ ಯಾರೋ ಒಬ್ಬ ಕಾಲುಗಳನ್ನು ಬೆಸೆದು ಒಂದು ರೀತಿ ಅಲಕ್ಷ್ಯದಿಂದ ಕುಳಿತಿದ್ದಾನೆ. ಮಾಂತ್ರಿಕ ಜೋರಾಗಿ ಕೆಮ್ಮಿದ.

ನಿಧಾನವಾಗಿ ತಲೆ ಎತ್ತಿದ.

ಮುಖದ ತುಂಬಾ ಗಡ್ಡ ಬೆಳೆದುಕೊಂಡಿರುವ ಮುದುಕ... ಹಸಿರು ಗಿಡಗಳ ರಾಮಯ್ಯ!

ಅಬ್ಬ... ಎಂತಹ ಪೊಗರು!

ರುದ್ರನಾಗ ಅವನತ್ತ ಒಂದು ಉರಿಗಣ್ಣಿನ ನೋಟವನ್ನು ಬೀರಿದ. ರಾಮಯ್ಯ ನೋಡಿದ. ತಣ್ಣನೆಯ ಶೀತಲ ನೋಟ. ಉದಾಸೀನ ಭಾವ! ಊರಿನ ಕೆಲವು ಮಂದಿ ಅಲ್ಲಿದ್ದರು. ಅವರು ಭಯದಿಂದ ನೋಡುತ್ತಿದ್ದಾರೆ.

ಮುಗಿಯಿತು... ಬಡಪಾಯಿ ರಾಮಯ್ಯನ ಕತೆ ಮುಗಿಯಿತು. ಈ ಕಿರಾತಕ ರುದ್ರನಾಗ ಈ ರಾತ್ರಿಯೇ ಏನಾದರೂ ಮಾಡಿಬಿಡುತ್ತಾನೆ.

ರಾಮಯ್ಯ ಕೋಪ ಸಹಿಸುತ್ತಿದ್ದಾನೆ. ನನ್ನ ಇಬ್ಬರು ಮಕ್ಕಳನ್ನು ಕೊಂದವನು ಈ ರುದ್ರ... ರುದ್ರನಾಗ. ಅವನಿಗೆ ಬುದ್ಧಿ ಕಲಿಸಬೇಕು. ಎಂತಹ ಹುಚ್ಚು ಆಲೋಚನೆ... ಹಸಿರು ಗಿಡಗಳ ಸಂಗಾತಿಗೆ ಮಾಂತ್ರಿಕನಿಗೆ ಬುದ್ಧಿ ಕಲಿಸುವ ಆಲೋಚನೆ. ಇದು ಬರಬಾರದಿತ್ತು ಬಿಡಿ.

ರಾಮಯ್ಯ ಏನಂತ ಅಂದುಕೊಂಡನು ಗೊತ್ತೆ? ಬಲು ವಿಚಿತ್ರ. ಇನ್ನು ಮುಂದೆ ಈ ಮಾಂತ್ರಿಕ ರುದ್ರನಾಗ ಮಂತ್ರ ಹೇಳಬಾರದು.

ಮಾಂತ್ರಿಕ ವಿದ್ಯೆ ಗೊತ್ತಿದ್ದರೂ ಸಹ ಅದನ್ನು ಯಾರ ಮೇಲೂ ಪ್ರಯೋಗಿಸಬಾರದು. ಅಂತಹ ಪರಿಸ್ಥಿತಿ ಬರಬೇಕು. ಈಗ ನಾನು ಅನುಭವಿಸುತ್ತಿರುವ ದುಃಖವನ್ನು ಅವನು ಸಹ ಅನುಭವಿಸಬೇಕು. ಇದು ರಾಮಯ್ಯನ ಪ್ರತಿಜ್ಞೆ. ಇದು ಈಡೇರುವುದೆ? ಕಾಲವೇ ಅದನ್ನು ತಿಳಿಸಬೇಕು.

* * *

ರಾತ್ರಿ ಒಂಭತ್ತು ಗಂಟೆ.

ಪಕ್ಕದ ಊರಿಗೆ ಹೋಗಿದ್ದ ಶ್ರೀಮಂತ ರಾಜಾರಾಯ ಕಾರಿನಲ್ಲಿ ಬರುತ್ತಿದ್ದಾನೆ. ಡ್ರೈವರ್ ರಜಾ ಹೋಗಿದ್ದ ಎಂದು ಅವನೇ ಡ್ರೈವಿಂಗ್ ಮಾಡುತ್ತಿದ್ದಾನೆ. ಕಗ್ಗಾಡಿನ ರಸ್ತೆ, ವಿಪರೀತ ತಿರುವುಗಳು. ಎಚ್ಚರಿಕೆಯಿಂದ ಕಾರನ್ನು ಓಡಿಸುತ್ತಿದ್ದಾನೆ. ಅಲ್ಲಿ... ದೂರದಲ್ಲಿ ಯಾರೋ ಮಲಗಿದ್ದಾರೆ. ಮೈ ತುಂಬಾ ಕಂಬಳಿ ಹೊದೆದುಕೊಂಡಿದ್ದಾರೆ.

ರಾಜಾರಾಯ ಹಾರನ್ ಮಾಡಿದ.

ಇಲ್ಲ. ಅಲುಗಾಡಲಿಲ್ಲ. ಕೋಪ ಬಂದಿತು. ಕಾರಿನಿಂದ ಇಳಿದು ಹತ್ತಿರ ಬರುತ್ತಾ `ಏ ಯಾರಯ್ಯ ನೀನು?'

ಉತ್ತರ ಬರಲಿಲ್ಲ.

ಕೈಗಳಿದ್ದರೂ ಸಹ ಈ ಅಹಂಕಾರದ ಮನುಷ್ಯ ಕಾಲಿನಿಂದ ನೆಲದ ಮೇಲಿದ್ದವನ ಬೆನ್ನಿಗೆ ಜಾಡಿಸಿದ. ಕಂಬಳಿ ದೂರ ಸರಿಯಿತು. ಮೆಲ್ಲಗೆ ಕತ್ತನ್ನು ಹೊರಳಿಸಿದ.

ಗಡ್ಡ ಬೆಳೆದಿರುವ ಮುಖ ಕಂಡಿತು. ಹಸಿರು ಗಿಡಗಳ ರಾಮಯ್ಯ!

ರಾಜಾರಾಯ ಬೆಚ್ಚಿಬಿದ್ದು ಹಿಂದೆ ಸರಿದ. ಭಯಮಿಶ್ರಿತ ಅನುಮಾನ ಕಾಡಲಾರಂಭಿಸಿತು. ಇದನ್ನು ನಿರೀಕ್ಷಿಸಿರಲಿಲ್ಲ. ರಾಮಯ್ಯ ನೆಲದ ಮೇಲೆ ಮೊದಲೇ ತಂದು ಇರಿಸಿಕೊಂಡಿದ್ದ ಮುಳ್ಳಿನ ಗಿಡಗಳಿಂದ ರಾಜಾರಾಯನ ಮುಖಕ್ಕೆ ರಾಚಿದ. ಎದೆಗೆ ಉಜ್ಜಿದ. ಚರ್ಮ ಹರಿದು ರಕ್ತ ಬಂದಿತು ಮುಖ ಮತ್ತು ಎದೆಯಿಂದ.

ರಾಜಾರಾಯ ತತ್ತರಿಸುತ್ತಿರುವಾಗಲೇ ಈ ರಾಮಯ್ಯ ಓಡಲಾರಂಭಿಸಿದ. ಬರೀ ಮುಳ್ಳಿನಿಂದ ಹೊಡೆಯಲು ಈ ರಾಮಯ್ಯ ಈ ಸಾಹಸ ಮಾಡಬೇಕಿತ್ತೆ? ಅವನು ಬರೀ ರಾಮಯ್ಯ ಅಲ್ಲ ಹಸಿರು ಗಿಡಗಳ ರಾಮಯ್ಯ! ಈಗ ನೋಡಿ ರಾಜಾರಾಯನ ಪರಿಸ್ಥಿತಿ?

ರಾತ್ರಿ ಒಂಭತ್ತು ಗಂಟೆ. ಕಾಡಿನ ರಸ್ತೆ.

ಮರವೊಂದರ ಹತ್ತಿರ ಅಂಬಾಸಿಡರ್ ಕಾರು ನಿಂತಿದೆ. ಅದರ ಹೆಡ್‌ಲೈಟ್ ಉರಿಯುತ್ತಿದೆ. ಕಾರಿನ ಹತ್ತಿರ ರಾಜಾರಾಯ ನಿಂತಿದ್ದಾನೆ. ಅವನ ಮುಖ ಮತ್ತು ಎದೆಯ ತುಂಬಾ ಮುಳ್ಳಿನಿಂದ ಗೀರಿರುವ ತರಚು ಗಾಯಗಳಾಗಿವೆ. ರಕ್ತ ಜಿನುಗುತ್ತಿದೆ.

ರಾಮಯ್ಯ ಓಡಿಹೋಗಿದ್ದ. ರಾಜಾರಾಯ ಕೋಪದಿಂದ ಬುಸುಗುಡುತ್ತಾ ತನ್ನ ಕಾರಿನ ಹತ್ತಿರ ನಡೆದ.

ಶತ್ರು ಶೇಷ ಉಳಿಸಬಾರದು! ನಾನು ಇವನ ಮಕ್ಕಳನ್ನು ಕೊಂದಿರುವುದರಿಂದ ಹಸಿರು ಗಿಡಗಳ ರಾಮಯ್ಯ ನನ್ನ ಮೇಲೆ ದ್ವೇಷದಿಂದ ದಾಳಿ ಮಾಡಿದ್ದಾನೆ. ಇವನನ್ನು ಉಳಿಸಲಾರೆ. ಪ್ರಯೋಜನ ಇಲ್ಲ. ಈ ಆಲೋಚನೆ ಸ್ವಲ್ಪ ಮೊದಲೇ ಬಂದಿದ್ದರೆ ಚೆನ್ನಾಗಿರುತ್ತಿತ್ತು.

ಉರಿ... ವಿಪರೀತ ಉರಿ.

ಮುಖದ ತುಂಬಾ ಸಣ್ಣ ಸಣ್ಣ ಗುಳ್ಳೆಗಳಾಗುತ್ತಿವೆ. ಸಂಕಟ, ಉರಿ ತಡೆಯಲಾಗುತ್ತಿಲ್ಲ. ನೆಲದ ಮೇಲೆ ಬಿದ್ದು ಉರುಳಾಡುತ್ತಿದ್ದಾನೆ ರಾಜಾರಾಯ. ಜನಗಳನ್ನು ಮತ್ತು ಸರ್ಕಾರವನ್ನು ವಂಚಿಸಿ ಕೆಲವು ಕೋಟಿಗಳನ್ನು ಸಂಪಾದಿಸಿದ್ದ. ಹತ್ತಾರು ಆಳುಗಳು ಬಂಗಲೆಯಲ್ಲಿ ಕೆಲಸ ಮಾಡಿಕೊಂಡಿದ್ದರು. ಈಗ ಯಾವುದೂ ಸಹ ರಕ್ಷಿಸಲು ಬರುತ್ತಿಲ್ಲ. ನೀರಿನಿಂದ ಹೊರ ತೆಗೆದ ಮೀನಿನಂತೆ ಚಡಪಡಿಸುತ್ತಿದ್ದಾನೆ. ಮುಖದಲ್ಲಿ ಯಮಯಾತನೆಯ ಛಾಯೆ ಕಾಣುತ್ತಿವೆ. ಇಡೀ ದೇಹ ಊದಿಕೊಂಡಿತು. ಗುಳ್ಳೆಗಳು ಗಡ್ಡೆಗಳಾದವು! ಬಾಯಿಂದ ರಕ್ತ ಹೊರಬಂದಿತು. ಇದೇ ರೀತಿ ಸುಮಾರು ಅರ್ಧ ಗಂಟೆಯ ಕಾಲ ನರಕದ ಶಿಕ್ಷೆಯನ್ನು ಇಲ್ಲೇ ಅನುಭವಿಸಿದ. ಬಾಯಿಂದ ನೊರೆ ಬರುತ್ತಿದೆ. ಕತ್ತು ವಾಲಿಕೊಂಡಿತು. ಯಾತನೆ ಕೊನೆಗೊಂಡಿತು.

ಮರದ ಮರೆಯಿಂದ ಕಾಣಿಸಿಕೊಂಡನು ರಾಮಯ್ಯ. ಕೋಪ, ತಿರಸ್ಕಾರದ ನೋಟದಲ್ಲಿದೆ. ರಾಮಯ್ಯನ ಸೇಡು ತೀರಿತ್ತು. ಸದಾ ಹಸಿರು ಗಿಡಗಳ ನಡುವೆ ಇರುತ್ತಿದ್ದ ರಾಮಯ್ಯ ಈಗ ಅದನ್ನೇ ಅಸ್ತ್ರವಾಗಿ ಬಳಸಿದ್ದ. ಜಾಬಲಿ ಗಿಡದ ಮುಳ್ಳು. ಭಯಂಕರ ವಿಷದ ಮುಳ್ಳು.

* * *

ಬೆಳಗಿನ ಹನ್ನೊಂದು ಗಂಟೆ. ಬಿಸಿಲಿನ ಪ್ರಖರತೆ ಜಾಸ್ತಿಯಾಗಿದೆ. ಕಡಿದಾದ ಕಾಡಿನ ರಸ್ತೆಯ ನಡುವೆ ಕಾರು ತುಂಬಾ ನಿಧಾನವಾಗಿ ಚಲಿಸುತ್ತಿದೆ. ಗಂಡ ಮತ್ತು ಹೆಂಡತಿ ಇಬ್ಬರೇ ಇದ್ದಾರೆ. ಹೆಂಡತಿ ತುಂಬು ಗರ್ಭಿಣಿ. ಅವಳ ಹೆಸರು ಅರುಂಧತಿ. ಅವಳ ಗಂಡ ಮನೋಹರ ಹೆಂಡತಿಯನ್ನು ತೋಳಿನಿಂದ ಬಳಸಿ ತನ್ನ ಕೆನ್ನೆ ಚುಂಬಿಸಿದ.

ಅರುಂಧತಿ ಗಾಬರಿಯಿಂದ 'ರೀ... ಇದು ಕಾಡಿನ ರಸ್ತೆ. ನಿಮ್ಮ ಗಮನ ಅಲ್ಲಿರಲಿ'

ಮನೋಹರ ನಸುನಗುತ್ತಾ ದೂರ ಸರಿದ. ಅವರಿಬ್ಬರು ಸೋಲಿಗಪುರದ ಕಡೆ ಪ್ರಯಾಣ ಮಾಡುತ್ತಿದ್ದಾರೆ. ಈ ಊರು ಅವಳ ತವರುಮನೆ. ಹೆಂಡತಿಯ ಬಯಕೆಯಂತೆ ಚೊಚ್ಚಲ ಹೆರಿಗೆ ತವರು ಮನೆಯಲ್ಲಿ ನಡೆಯಲಿ ಎಂದು ಅವಳನ್ನು ಅಲ್ಲಿಗೆ ಕರೆದುಕೊಂಡು ಹೊರಟಿದ್ದಾನೆ.

ಮನೋಹರ ಶ್ರೀಮಂತ ಯುವಕ. ನಗರದಲ್ಲಿ ಫ್ಯಾಕ್ಟರಿ, ಕಾಂಪ್ಲೆಕ್ಸ್, ಥಿಯೇಟರ್ ಇದೆ. ಆಧುನಿಕ ಮನೋಭಾವದ ವಿದ್ಯಾವಂತ ಮೂಢನಂಬಿಕೆಗಳನ್ನು ವಿರೋಧಿಸುವ ಮತ್ತು ದೇವರ ಮತ್ತು ದೆವ್ವಗಳನ್ನು ನಂಬದವನು. ವಿಪರೀತ ಮೊಂಡ. ತಾನು ಹೇಳಿದ್ದೇ ಸರಿ ಎನ್ನುವ ಮನೋಭಾವ ಅವನಲ್ಲಿದೆ. ಅದರೊಂದಿಗೆ ಮುಂಗೋಪ. ಆದರೆ ಹೆಂಡತಿಯೆಂದರೆ ವಿಪರೀತ ಪ್ರೀತಿ. ನಗರದ ನರ್ಸಿಂಗ್ ಹೋಂನಲ್ಲಿ ಸುಖವಾಗಿ ಹೆರಿಗೆ ಆಗಲಿ ಎಂದು ಅವನ ಆಸೆ.

ಲಕ್ಷ ಖರ್ಚು ಮಾಡಲು ಅವನು ಸಿದ್ಧ. ಆದರೆ ಹೆಂಡತಿ ಒಪ್ಪುತ್ತಿಲ್ಲ. ಚೊಚ್ಚಲ ಹೆರಿಗೆ ಅಣ್ಣನ ಮನೆಯಲ್ಲಿ ಆಗಬೇಕು. ತಾನು ಅಣ್ಣನನ್ನು ನೋಡಬೇಕು ಎಂದು ಹಟ ಮಾಡಿದ್ದರಿಂದ ಒಪ್ಪಿಕೊಂಡಿದ್ದ.

ಕಾರು ಚಲಿಸುತ್ತಿದೆ. ಅರುಂಧತಿ ಎರಡು ಗ್ಲಾಸ್‌ಗಳಿಗೆ ಫ್ಲಾಸ್ಕ್‌ನಿಂದ ಕಾಫಿ ಬಗ್ಗಿಸಿ ಗಂಡನಿಗೆ ನೀಡಿದಳು. ಮನೋಹರ ಕಾಫಿ ಕುಡಿಯುತ್ತಾ `ಅರು ನಿನ್ನ ಅಣ್ಣ ಒಬ್ಬ ಮಾಂತ್ರಿಕ ತಾನೆ?'

`ಹೌದು...'

ಮನೋಹರ `ನೀನು ಬಾಲ್ಯದಿಂದಲೂ ಸಹ ಇದನ್ನು ನೋಡುತ್ತಾ ಬೆಳೆದಿದ್ದೀಯ. ಈ ಮಂತ್ರ ವಿದ್ಯೆ, ದೆವ್ವ ಮತ್ತು ಭೂತ ಇವೆಲ್ಲಾ ನಿಜವೆ?'

ಅರುಂಧತಿ ತಲೆಯಾಡಿಸುತ್ತಾ 'ನಿಜ.'

`ನಿನಗೆ ಅನುಭವ ಆಗಿದೆಯೇ?'

`ಇಲ್ಲ.'

`ಹಾಗಾದರೆ ನಿಜಾ ಅಂತ ಹ್ಯಾಗೆ ಹೇಳುತ್ತೀಯಾ ಅರುಂಧತಿ?'

`ನಮ್ಮೂರಲ್ಲಿ ನಡೆದಿರುವ ಘಟನೆಗಳನ್ನು ನೋಡಿದ್ದೇನೆ. ನಮ್ಮ ಅಣ್ಣನಿಂದಾಗಿ ಎಷ್ಟೋ ಮಂದಿ ರಕ್ತ ಕಾರಿಕೊಂಡು ಸತ್ತಿದ್ದಾರೆ. ಅಣ್ಣಯ್ಯ ಸಾಧನೆ ಮಾಡಿ ಭಯಂಕರ ಶಕ್ತಿಗಳನ್ನು ವಶಪಡಿಸಿಕೊಂಡಿದ್ದಾನೆ. ಅವನೆಂದರೆ ಜನಗಳು ನಡುಗುತ್ತಾರೆ.'

ಮನೋಹರ ನಗಲಾರಂಭಿಸಿದ.

ಕೋಪದಿಂದ `ಯಾಕೆ ನಗುತ್ತಿದ್ದೀರಾ?'

ಮನೋಹರ `ನಿನ್ನ ಅಣ್ಣಯ್ಯ ಎಲ್ಲೋ ಕುಳಿತುಕೊಂಡು ಮಾಟ ಮಾಡಿದರೆ ರಕ್ತ